(ಇಂದು ದಿನಾಂಕಃ 18-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು ಶ್ರೀ.ಎಸ್.ಜಿ.ಜೆ ವಾದಿ ಪರ ವಕೀಲರಿಂದ .ಃ**

1. ದಾವಾ ಆಸ್ತಿಗೆ ಹತ್ತಿಕೊಂಡು ಉತ್ತರ ದಿಕ್ಕಿಗೆ ನನ್ನ ಜಮೀನು ಇರುತ್ತದೆ. ದಾವಾ ಆಸ್ತಿ ಸರ್ವೆ ನಂಬರ 44 ರ ಉತ್ತರಕ್ಕೆ ಗುಡ್ಡ ಮತ್ತು ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ಗುಡ್ಡ ಇದೆ ಎಂದರೆ ಸಾಕ್ಷಿ ಎರಡೇ ಕಡೆ ಗುಡ್ಡ ಇದೆ ಎಂದು ಹೇಳುತ್ತಾರೆ. ಸರ್ವೆ ನಂಬರ 44 ರ ದಕ್ಷಿಣಕ್ಕೆ ನನ್ನ ಜಮೀನು ಸರ್ವೆ ನಂಬರ ಇರುತ್ತದೆ. ಅದು ನನ್ನ ಹೆಸರಿನಲ್ಲಿ ಇಲ್ಲ. ನನ್ನ ತಂದೆ ಮಹೇಶ, ಉಮೇಶ, ವಿಜಯಕುಮಾರ ಮತ್ತು ಪರಮೇಶ್ವರವರ ಹೆಸರಿಗೆ ಜಂಟಿ ಇದೆ. ಹಣಮಂತಪ್ಪ ಮಾಳಗಿರವರ ಜಮೀನು ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುತ್ತದೆ. ನಾನು ದಾವಾ ಆಸ್ತಿಯ ಹಿಂದಿನ ಪಹಣಿಗಳನ್ನು ನೋಡಿರುವುದಿಲ್ಲ. ಸಿದ್ದಪ್ಪ ಹೈಬತಿ ಮತ್ತು ಶಿವಪ್ಪ ಹೈಬತಿಯವರು ಯಾರು ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ಹೈಬತಿ ಮತ್ತು ಶಿವಪ್ಪ ಹೈಬತಿಯವರಿಂದ ಮುಂದೆ ಪಹಣಿ ಯಾರ ಹೆಸರಿಗೆ ಹೊಯಿತು ಎಂದು ನನಗೆ ಗೊತ್ತಿಲ್ಲ. ರಾಮಣ್ಣ ತಂದೆ ಯಲಪ್ಪರವರನ್ನು ನಾನು ನೋಡಿಲ್ಲ. ಸಿದ್ದಪ್ಪ ಹೈಬತಿ ಮತ್ತು ಶಿವಪ್ಪ ಹೈಬತಿಯವರ ಕುಟುಂಬಕ್ಕು ಹಾಗೂ ಸಿದ್ದಪ್ಪ ತಂದೆ ಹಾಶಪ್ಪರವರ ಕುಟುಂಬಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಸಿದ್ದಪ್ಪ ತಂದೆ ಹಾಶಪ್ಪರವರಿಗೆ ಈ ಜಮೀನು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಭೀಮು ತಂದೆ ಘೇಮುರವರು ಯಾರು ಮತ್ತು ಅವರ ಮಕ್ಕಳು ಯಾರು ಎಂದು ನನಗೆ ಗೊತ್ತಿಲ್ಲ. ನನಗೆ ವಾದಿಯರೆಲ್ಲರೂ ಗೊತ್ತಿರುತ್ತಾರೆ. ವಾದಿಯರ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಅವರು ಯಾರಿಂದ ಜಮೀನನ್ನು ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಜಮೀನನ್ನು ಖರೀದಿ ಮಾಡಿಲ್ಲ. ಯಾವುದೇ ಆಸ್ತಿ ಒಂದು ಕುಟುಂಬದಿಂದ

ಇನ್ನೊಂದು ಕುಟುಂಬಕ್ಕೆ ಬರಬೇಕಾದರೆ ನೊಂದಾಯಿತ ದಾಖಲೆಗಳ ಮೂಲಕ ಬರಬೇಕು ಎಂದರೆ ಸರಿ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.